ಕುಳ್ಳಿರಿಸಿ, ತಾವೂ ಒಂದು ಕುರ್ಚಿಯಲ್ಲಿ ಕುಳಿತು ಹಿಂದಿಯಲ್ಲಿ ಮಾತನಾಡತೊಡಗಿದರು. ಸ್ವಲ್ಪ ಸಮಯದ ನಂತರ ಅವರ ಇಂಗಿತದಂತೆ ಸೇವಕನು ಸ್ವಲ್ಪ ಹಣ್ಣುಗಳನ್ನು ತಂದು ಸಾಧುಗಳ ಮುಂದಿಟ್ಟನು. ಸಾಧುಗಳು ಒಂದು ಬಾಳೆಹಣ್ಣನ್ನು ಮಾತ್ರ ತೆಗೆದುಕೊಂಡರು. ಸಂಭಾಷಣೆ ಮುಗಿದ ಬಳಿಕ ಸಾಧುಗಳು ಹೊರಟುಹೋದರು. ಬಾಬಾ ಅವರ ಪ್ರಶಂಸೆ ಮಾಡುತ್ತ, ''ನೋಡು, ಎಷ್ಟು ಸಂಯಮಿ ಅವರು! ರಾತ್ರಿ ಸ್ವಲ್ಪ ಹಾಲು, ಒಂದು ಬಾಳೆಹಣ್ಣು ಬಿಟ್ಟು ಮತ್ತೇನನ್ನೂ ಸೇವಿಸುವುದಿಲ್ಲ. ಜೊತೆಯಲ್ಲಿ ಏನನ್ನೂ ತೆಗೆದುಕೊಂಡು ಹೋಗಲಿಲ್ಲ. ನಮ್ಮಲ್ಲಿ ಅನೇಕರು ಈ ಎಲ್ಲ ಸಾಧುಗಳಿಗೆ ಪ್ರಾಮುಖ್ಯತೆ ನೀಡುವುದಿಲ್ಲ. ಒಂದು ರಾತ್ರಿ ತಂಗಲು ಇಚ್ಛಿಸಿದರೂ ಅವರನ್ನು ಇರಗೊಡುವುದಿಲ್ಲ. ನಾವು ಯಾತ್ರೆ ಮಾಡುವಾಗ ಎಷ್ಟೊಂದು ರಾತ್ರಿ ಎಷ್ಟು ಸ್ಥಳಗಳಲ್ಲಿ ಆಶ್ರಯ ಪಡೆದಿದ್ದೇವೆ! ಹೊರಗೆ ಹೋದರೆ ಇವೆಲ್ಲಾ ತಿಳಿಯುತ್ತದೆ. ಸಾಧುಗಳ ಕಷ್ಟ ಸಾಧುಗಳಿಗೆ ಮಾತ್ರ ತಿಳಿಯುವುದು. ಸಾಧುಗಳು ಸಾಮಾನ್ಯವಾಗಿ ರಾತ್ರಿ ಹೊತ್ತು ಗೃಹಸ್ಥರ ಮನೆಯಲ್ಲಿ ತಂಗಲು ಇಷ್ಟ ಪಡುವುದಿಲ್ಲ.''

ಒಂದೆರಡು ದಿನಗಳ ನಂತರ ಸಂಧ್ಯಾರತಿಯಾದ ಮೇಲೆ ಬೇಲೂರು ಮಠದ ಮಹಡಿಯ ಮೇಲೆ ಗಂಗಾನದಿಗೆ ಎದುರಾಗಿದ್ದ ವರಾಂಡಕ್ಕೆ ಕುರ್ಚಿಯನ್ನು ತರಲಾಯಿತು. ಅದನ್ನು ಯಾವ ಕಡೆಗೆ ತಿರುಗಿಸಿ ಇಡಬೇಕೆಂಬುದು ಸೇವಕನಿಗೆ ತಿಳಿಯಲಿಲ್ಲ. ಬಾಬಾ ಹೇಳಿದರು: ''ದಕ್ಷಿಣೇಶ್ವರದ ಕಡೆಗೆ ತಿರುಗಿಸಿ ಇಡು – ಅದನ್ನೂ ಹೇಳಿಕೊಡಬೇಕೆ?''

ಸ್ವಲ್ಪ ಹೊತ್ತು ಮೌನವಾಗಿ ಕುಳಿತ್ತಿದ್ದರು. ಈ ನಡುವೆ ೩–೪ ಸಾಧುಗಳು ಹಾಗೂ ಭಕ್ತರು ಬಂದು ನೆಲದ ಮೇಲೆ ಕುಳಿತರು. ಬಾಬಾ ಹೇಳಿದರು, ''ಆಹಾ! ಈ ಗಂಗೆಯ ತೀರದಲ್ಲೇ ನಡೆದು ಹೋಗಲು ಅದೆಷ್ಟು ಚೆನ್ನ! ನನಗೆ ಒಂದು idea (ಆಲೋಚನೆ)ಇತ್ತು, ಆದರೆ ಅದು ನಡೆಯಲಿಲ್ಲ. ದಾರಿಯ ನಡುವೆ ಮುರ್ಶಿದಾಬಾದಿನಲ್ಲೆ ನಿಂತುಬಿಟ್ಟೆ. ಗಂಗೆಯ ದಡದಲ್ಲೇ ಹೋಗಬೇಕು – ನೇರ ಗಂಗಾಸಾಗರದಿಂದ ಗಂಗೋತ್ರಿವರೆಗೆ; ಪಶ್ಚಿಮದ ದಾರಿಯಲ್ಲೇ ಹೋಗಬೇಕು. ಯಾರೇ ಆದರೂ ಹೋಗಲಿ, ಸಂತೋಷ. ಈಗ ನನಗೆ ಹಾಗೆ ಮಾಡುವಷ್ಟು ಶಕ್ತಿಯಿಲ್ಲ. ನಾಳೆಯೇ ಬೇಕಾದರೆ ಐದು ಮಂದಿ ಹೊರಡಿ – ನಮ್ಮ ಮಠದ ಸಾಧುಗಳು. 'ಮಿಷನ್ನಿನ ಸಾಧು' ಎನ್ನಬೇಡಿ. ಮಠದ ಸಾಧು, ಮಿಷನ್ನಿನ ಕರ್ಮಿ. ಮಿಷನ್ ಎಂದರೆ ಪರಿಹಾರ ಕಾರ್ಯ, ಸೇವಾಕಾರ್ಯ ಇತ್ಯಾದಿ.

''ಬೇಲೂರಿನಿಂದ ಹೊರಟಾಗ ದಾರಿಯಲ್ಲಿ ನೋಡುತ್ತೀರಿ, ಆ ದಡದಲ್ಲಿ ದಕ್ಷಿಣೇಶ್ವರ, ಆಮೇಲೆ ಎಲ್ಲಾ ಕಾರ್ಖಾನೆ–ಚಿಮಿಣಿಗಳು, ಹೊಗೆ – ಎಷ್ಟು ದೂರದವರೆಗೆ! ಈ ಕಡೆ ಶ್ರೀರಾಮಪುರ, ಆಮೇಲೆ ನೈಹಾಟಿ. ಇನ್ನೂ ಮುಂದೆ ಹೋದರೆ ಕಾಲ್ನಾ, ನವದ್ವೀಪ. ಅದನ್ನೂ ದಾಟಿ ಹೋದರೆ ಪಲಾಶಿ, ಮುರ್ಶಿದಾಬಾದ್ ಸಿಗುತ್ತದೆ. ಇನ್ನೂ ಉತ್ತರಕ್ಕೆ ಬಲಗಡೆಗೆ ಪದ್ಮಾನದಿ ಹರಿಯುತ್ತದೆ – ಗಂಗೆಯ ದಡದಲ್ಲೇ ಹೋಗಬೇಕು. ನೀರಿನ ಇಳಿತದ ಸಮಯದಲ್ಲಿ ನಡೆಯಬೇಕು. ಭಿಕ್ಷೆಗಾಗಿ ಸಮೀಪದ ಗ್ರಾಮಗಳಿಗೆ ಹೋಗಬೇಕು. ಜೊತೆಯಲ್ಲಿ ಒಂದು ಪೈಸೆಯನ್ನೂ ತೆಗೆದುಕೊಂಡು ಹೋಗಬಾರದು. ಆಗಲೇ ಚೆನ್ನ. ಸಂಪೂರ್ಣ ಈಶ್ವರನಲ್ಲೇ ನಿರ್ಭರವಾಗಿರಬೇಕು. ಹಣವನ್ನು ತೆಗೆದುಕೊಂಡು, ರೈಲುಗಾಡಿಯಲ್ಲಿ ಯಾತ್ರೆ ಮಾಡುವುದೇನು ಸುಖ? ಊರುಗಳನ್ನೇ ನೋಡಲಾಗುವುದಿಲ್ಲ. ಒಂದೇ ರಾತ್ರಿ ೪೦೦ ಮೈಲುಗಳ ಪ್ರಯಾಣ ಮಾಡಿಬಿಟ್ಟರೆ ಅದೆಂಥ ಯಾತ್ರೆ?

''ಮತ್ತೊಂದು ವಿಷಯ – ಎಲ್ಲಿ ಹೋದರೂ ಪ್ರಚಾರ, ದೇವರ ನಾಮ, ಗುಣ, ಸಂಕೀರ್ತನೆಗಳನ್ನು ಮಾಡಬೇಕು. ಗಂಗಾತೀರದಲ್ಲಿ ಎಷ್ಟು ಸಾಧುಗಳ ದರ್ಶನವಾಗುತ್ತದೆ! ನಿಜವಾದ ಸಾಧುಗಳು ಭಗವಂತನ ಮೇಲೆ ನಿರ್ಭರರಾಗಿ ಜೀವನವನ್ನು ಕಳೆಯುತ್ತಿರುವವರು. ಇಂಥವರೇ ಭಕ್ತ ಮಹಾಪುರುಷರು!

''ನಾನು ಹಣವನ್ನು ಸ್ಪರ್ಶಿಸುತ್ತಿರಲಿಲ್ಲವೆಂದು ಸ್ವಾಮೀಜಿ ನನ್ನನ್ನು ಅದೆಷ್ಟು ಪ್ರೀತಿಸುತ್ತಿದ್ದರು! ಯಾತ್ರೆ ಮಾಡುವಾಗ ಒಮ್ಮೆ ಗುಜರಾತಿನಲ್ಲಿ ಡಕಾಯಿತರ ಕೈಗೆ ಸಿಕ್ಕಿಬಿದ್ದು ಪ್ರಾಣ ಹೋಗುತ್ತಿತ್ತು. ಹಣವಿಲ್ಲದ ಕಾರಣ ಬದುಕಿಕೊಂಡೆ. ಆಹಾ! ಅದೆಂಥ ಅವಸ್ಥೆ! ಸರ್ವದಾ ನಿರ್ಭರತೆ, ಸರ್ವದಾ ಭಗವಂತನದೇ ಚಿಂತೆ!

''ಹಣವಲ್ಲವೇ ಭಗವಂತನನ್ನು ಮರೆಸುವುದು? ಭಗವಂತನಲ್ಲಿ ನಿರ್ಭರತೆಯೇ ಆತ್ಮನಿರ್ಭರತೆ. ಹಣದ ನಿರ್ಭರತೆ ಆತ್ಮನಿರ್ಭರತೆಯಲ್ಲ. ಕೆಲಸಮಾಡಿ ಹಣವನ್ನು ಸಂಪಾದಿಸುವವರನ್ನು ನೋಡು! ಅವರು ನಿಜವಾಗಿಯೂ ಭಗವಂತನಲ್ಲಿ ವಿಶ್ವಾಸವಿಡಲಾರರು, ಸಂಪೂರ್ಣ ನಿರ್ಭರರಾಗಿರಲಾರರು. ಅವೆರಡೂ ಜೊತೆಯಲ್ಲಿ ಸಾಗುವುದಿಲ್ಲ. ಎರಡು ದೋಣಿಗಳಲ್ಲಿ ಕಾಲಿಡುವುದು ಭಯಾನಕ.''

## ಶ್ರೀರಾಮಕೃಷ್ಣರು ನಡತೆಯ ಬಗ್ಗೆ

''ಭಕ್ತನಾಗು, ಆದರೆ ಮೂರ್ಖನಾಗಿರಬೇಡ'' ಎನ್ನುತ್ತಿದ್ದರು ಶ್ರೀರಾಮಕೃಷ್ಣರು. ಒಬ್ಬ ಯಾವಾಗಲೂ ಎಚ್ಚರಿಕೆಯಿಂದಿರಬೇಕು. ಶ್ರೀರಾಮಕೃಷ್ಣರು ಹೇಳುತ್ತಿದ್ದರು, ''ನನ್ನನ್ನು ನೋಡು! ಜಗನ್ಮಾತೆ ನನ್ನನ್ನು ಎಂಥ ಅವಸ್ಥೆಯಲ್ಲಿ ಇಟ್ಟಿದ್ದಾಳೆಂದರೆ, ಧರಿಸಿದ ಬಟ್ಟೆಯನ್ನೂ ನನಗೆ ಸರಿಯಾಗಿ ಇಟ್ಟುಕೊಳ್ಳಲಾಗುತ್ತಿಲ್ಲ. ಆದರೂ ನಾನು ಯಾವ ಕೆಲಸವನ್ನೂ ಮರೆಯುವುದಿಲ್ಲ.'' ಅವರು ಹೇಳುತ್ತಿದ್ದರು, ''ಎಚ್ಚರಿಕೆಯಿಂದ ಇಲ್ಲದಿರುವವನು ಮೂರ್ಖನೇ.''

*(ಸ್ವಾಮಿ ತುರೀಯಾನಂದರ ವಿವರಣೆ, 'Ramakrishna As We Saw Him' ಗ್ರಂಥದಿಂದ, ಪು.೧೯೪)*

ಭಾಗ ೨

# ಸ್ವಾಮಿ ಪ್ರೇಮಾನಂದರು

**ಸ್ವಾಮಿ ಅಶೋಕಾನಂದ**

ಅನುವಾದ: ಡಾ. ಇ. ವಸಂತಕುಮಾರ್



ಆಶ್ಚರ್ಯವೆಂದರೆ, ಶ್ರೀರಾಮಕೃಷ್ಣರು ಕೂಡ ಸ್ವಾಮಿ ಪ್ರೇಮಾನಂದರನ್ನು ಜ್ಞಾನಮಾರ್ಗಕ್ಕೆ ಸೇರಿದವರಂತೆ ಕಂಡರು. ದಕ್ಷಿಣೇಶ್ವರದಲ್ಲಿ ಸ್ವಲ್ಪಕಾಲ ಶ್ರೀರಾಮಕೃಷ್ಣರೊಡನೆ ಇದ್ದ ಮೇಲೆ, ಬಾಬುರಾಮನು ಅವರನ್ನು ಆಧ್ಯಾತ್ಮಿಕ ಅನುಭವಕ್ಕಾಗಿ ಕೇಳಿಕೊಂಡನು. ಅವರ ಬಳಿ ಬರುತ್ತಿದ್ದ ಎಲ್ಲ ಯುವಶಿಷ್ಯರಿಗೂ ಒಂದಲ್ಲ ಒಂದು ಅನುಭವವಾಗಿತ್ತು: ಕೆಲವರಿಗೆ ಭಾವ, ಕೆಲವರಿಗೆ ಭಗವದ್ದರ್ಶನ ಹೀಗೆಲ್ಲ ಆಗಿತ್ತು. ಆದರೆ ತನಗೇನೂ ಆಗಿಲ್ಲವೆಂದು ಬಾಬುರಾಮನು ಹೇಳಿಕೊಂಡನು. ಕೆಲವು ದಿನಗಳ ಮಟ್ಟಿಗೆ ಬಾಬುರಾಮ ಮನೆಗೆ ಹೋದ. ಆ ಸಮಯದಲ್ಲಿ ಶ್ರೀರಾಮಕೃಷ್ಣರು ಜಗನ್ಮಾತೆಗೆ, 'ತಾಯಿ, ಬಾಬುರಾಮನಿಗೆ ನೀನು ಯಾವುದಾದರೂ ಅನುಭವವನ್ನು ಕರುಣಿಸುವುದು ಒಳ್ಳೆಯದು. ಇಲ್ಲವಾದರೆ ಅವನು ವಿಶ್ವಾಸ ಕಳೆದುಕೊಳ್ಳುವನು' ಎಂದು ಪ್ರಾರ್ಥಿಸಿದರು. 'ಅವನು ಆ ಗುಂಪಿಗೆ ಸೇರಿದವನಲ್ಲ. ಅವನಿಗೆ ಭಾವ ದೊರೆಯುವುದಿಲ್ಲ , ಜ್ಞಾನ ದೊರೆಯುವುದು' ಎಂದು ಭಗವತಿ ಹೇಳಿದಳಂತೆ. ಜ್ಞಾನ ಎಂದರೆ ತಾತ್ತ್ವಿಕ ಸತ್ಯಗಳನ್ನು ಬುದ್ಧಿಯ ಮೂಲಕ ಗ್ರಹಿಸುವುದಲ್ಲ. ಅದು ದೈವತ್ವದ ನಿರಪೇಕ್ಷ ಅಂಶದ ನೇರ ಅನುಭವ. ಆಧ್ಯಾತ್ಮಿಕ ಸತ್ಯವನ್ನು ಕೇವಲ ಬೌದ್ಧಿಕವಾಗಿ ತಿಳಿದುಕೊಳ್ಳುವುದು ಏನೂ ಅಲ್ಲ. ನೀವು ದೇವರ ವಿಷಯವಾಗಿ ಮಾತನಾಡಬಹುದು, ದೇವರನ್ನು ಕುರಿತು ಚಿಂತಿಸಬಹುದು, ದೇವರ ಬಗ್ಗೆ ವಿದ್ವತ್ಪೂರ್ಣ ಉಪನ್ಯಾಸವನ್ನು ಕೊಡಬಹುದು ಮತ್ತು ಭಗವಂತನನ್ನು ತಾತ್ತ್ವಿಕವಾಗಿ ವಿವರಿಸಬಹುದು. ಆದರೂ ಅದು ಏನೂ ಅಲ್ಲ. ಅದು ನೀರಸ. ಪ್ರತ್ಯಕ್ಷ ಅನುಭವವೇ ಬೇರೆ ವಿಷಯ.

ಜ್ಞಾನದ ಅನುಭವಕ್ಕೂ ಭಕ್ತಿಯ ಅನುಭವಕ್ಕೂ ವ್ಯತ್ಯಾಸವಿದೆ. ಮೊದಲನೆಯದು, ದೇಶ-ಕಾಲ-ನಿಮಿತ್ತಕ್ಕೆ ಅತೀತವಾದ ನಿರಪೇಕ್ಷ ಸತ್ಯವನ್ನು ಅನುಭವಿಸುವುದು. ಎರಡನೆಯದು, ರೂಪ ಅಥವಾ ಗುಣಗಳುಳ್ಳ ಭಗವಂತನನ್ನು ಅನುಭವಿಸುವುದು. ಸ್ವಾಮಿ ಪ್ರೇಮಾನಂದರು, ಭಕ್ತಿಗಿಂತ ಜ್ಞಾನವೇ ಪ್ರಧಾನವಾಗಿರುವವರ ಗುಂಪಿಗೆ ಸೇರಿದವರು. ಕೆಲವು ವೇಳೆ ಅವರಿಗೆ ಭಕ್ತಿಭಾವದ ಆನಂದಾತಿಶಯ ಉಂಟಾಗುತ್ತಿತ್ತು. ಆದರೆ ಅವರು ಭಗವಂತನಿಗಾಗಿ ಅತ್ತುದನ್ನಾಗಲಿ ಅಥವಾ ಅವರಲ್ಲಿ ಭಕ್ತರಿಗೆ ಬರುವ ಭಾವೋದ್ರೇಕವನ್ನಾಗಲಿ ನಾವು ನೋಡಿಲ್ಲ. ಆ ವಿಷಯದಲ್ಲಿ ಅವರು ಸಂಪೂರ್ಣ ನಿರ್ಲಿಪ್ತರೂ ಪ್ರಶಾಂತರೂ ಆಗಿದ್ದರು.

ಈ ವಿಷಯಗಳಲ್ಲಿ ಶ್ರೀರಾಮಕೃಷ್ಣರು ಸ್ವಾಮಿ ಪ್ರೇಮಾನಂದರ ಬಗ್ಗೆ ಏನು ಹೇಳಿದ್ದರೋ ಅಷ್ಟು ಮಾತ್ರ ನಮಗೆ ಗೊತ್ತು.

ಸ್ವಾಮಿ ಪ್ರೇಮಾನಂದರು ಯಾವ ಬಗೆಯ ಆಧ್ಯಾತ್ಮಿಕ ಸಾಧನೆಗಳನ್ನು ಮಾಡಿದರೊ, ಯಾವ ಅನುಭವಗಳನ್ನು ಅದರ ಫಲವಾಗಿ ಪಡೆದರೊ ನಮಗೆ ತಿಳಿಯದು. ಇದು ವಿಚಿತ್ರವಲ್ಲವೆ? ಅವರು ಪ್ರಧಾನ ಮಠದಲ್ಲಿ ಅನೇಕ ವರ್ಷಗಳ ಕಾಲ ಇದ್ದರು ಮತ್ತು ಅನೇಕರು ಅವರ ಬಳಿ ಬಂದರು. ಆದರೂ ಈ ಬಗ್ಗೆ ಯಾರೂ ಅವರಿಂದ ತಿಳಿದುಕೊಳ್ಳಲಿಲ್ಲ. ಅದು ಹೀಗೆಯೆ ಆಗುವುದು. ನೀವು ಮಹಾತ್ಮರೊಂದಿಗೆ ಇದ್ದಾಗ, ನಿಮಗೆ ಏನೇನು ಬೇಕೊ ಅದೇ ಮನಸ್ಸಿನ ತುಂಬ ಇರುವುದು. ಅವರ ಸಂಗದಲ್ಲಿ ಅನಂತತೆ ಎಷ್ಟರ ಮಟ್ಟಿಗೆ ಇರುವುದೆಂದರೆ, ಅವರು ನಿಮ್ಮಿಂದ ಕಳೆದುಹೋಗುವರು ಎಂದು ಯೋಚಿಸುವುದೇ ಇಲ್ಲ, ನೀವು ಸಂತೋಷವಾಗಿರುವಿರಿ, ಸಮಸ್ಯೆಗಳಿರದು. ನಿಮ್ಮ ಮನಸ್ಸು ಮೇಲ್ಮಟ್ಟಕ್ಕೆ ಹೋಗುವುದು, ಭಕ್ತಿಯಿಂದ ತುಂಬಿರುವುದು, ಆಧ್ಯಾತ್ಮಿಕ ನಿಷ್ಠೆಯಿಂದ ತುಂಬಿರುವುದು. ನೀವು ಸಂಪೂರ್ಣವಾಗಿ ಆಧ್ಯಾತ್ಮಿಕ ತನ್ಮಯತೆಯ ವಾತಾವರಣದಲ್ಲಿ ಇರುವಿರಿ ಮತ್ತು ಪ್ರಶ್ನೆಗಳನ್ನು ಕೇಳಲು ಮರೆಯುವಿರಿ.

ಅದು ಏನೇ ಆದರೂ, ಶ್ರೀರಾಮಕೃಷ್ಣರು ೧೮೮೫ರಲ್ಲಿ ದಾರುಣ ಕಾಯಿಲೆಗೆ ಒಳಗಾದರು. ಅವರ ಜೀವಿತದ ಕೊನೆಯ ಎಂಟು ತಿಂಗಳು ಅವರಿಗೆ ಅನವರತ ಸೇವೆ ಮಾಡಿದ ಶಿಷ್ಯರ ಪೈಕಿ ಒಬ್ಬರು ಪ್ರೇಮಾನಂದರು. ಶ್ರೀರಾಮಕೃಷ್ಣರು ೧೮೮೬ರ ಆಗಸ್ಟ್‌ನಲ್ಲಿ ಕಾಲವಾದ ನಂತರ ಬಾರಾನಗರದ ಬಾಡಿಗೆ ಮನೆಯೊಂದರಲ್ಲಿ ಆಶ್ರಮವನ್ನು ಸ್ಥಾಪಿಸಿದವರಲ್ಲಿ ಇವರೂ ಒಬ್ಬರು. ಅದು ಭೂತದ ಮನೆಯಾಗಿದ್ದರೂ ಅದನ್ನು ತೆಗೆದುಕೊಳ್ಳಲು ಕಾರಣ, ಮನೆ ದೊಡ್ಡದಾಗಿದ್ದು, ಬಾಡಿಗೆ ಬಹಳ ಕಡಿಮೆ ಇತ್ತು. ಅಂತಹ ಮನೆಯ ಹತ್ತಿರ ಬರಲೂ ಇತರರು ಇಚ್ಛಿಸುವುದಿಲ್ಲ, ಇದು ಅವರಿಗೆ ಅನುಕೂಲವೇ ಆಯಿತು. ಪಿಶಾಚಿಯೊಂದು ಬಂದುಹೋಗುವುದನ್ನು ನೋಡಿದ್ದರೆಂದು ನಾನು ಕೇಳಿದ್ದೆ. ಸಣ್ಣ ಕೋಣೆಯೊಂದರಲ್ಲಿ ಕಲ್ಲಿದ್ದಲನ್ನು ಇಡುತ್ತಿದ್ದರು. ಅಲ್ಲಿಗೆ ಬರುವ ಅಭ್ಯಾಸ ಆ ಪಿಶಾಚಿಗೆ ಇತ್ತಂತೆ. ಅದರಿಂದ ಅವರೇನೂ ಬಾಧಿತರಾಗಲಿಲ್ಲ.

ಬಾರಾನಗರದಲ್ಲಿ ಸ್ವಲ್ಪಕಾಲ ವಾಸವಿದ್ದ ಮೇಲೆ, ೧೮೮೬ರ ಕ್ರಿಸ್‌ಮಸ್ ಸಮಯದಲ್ಲಿ, ಸ್ವಾಮಿ ಪ್ರೇಮಾನಂದರ ತಾಯಿಯಿಂದ ಅವರ ಹಳ್ಳಿ ಆಂಟ್‌ಪುರಕ್ಕೆ ಬರಲು ಆಹ್ವಾನ ಬಂದಿತು. ನರೇನ್ ಮತ್ತು ಬಾಬುರಾಮನೂ ಸೇರಿದಂತೆ ಎಂಟು ಹುಡುಗರು ಹೋದರು. ಅಲ್ಲಿ ಅವರೆಲ್ಲ ನರೇನನಿಂದ ಸ್ಫೂರ್ತಿಗೊಂಡು ಉತ್ಕಟ ಆಧ್ಯಾತ್ಮಿಕ ಅಭೀಪ್ಸೆಗೊಳಗಾದರು. ಒಂದು ರಾತ್ರಿ ಅಂಗಳದಲ್ಲಿ ಧಗಧಗಿಸುತ್ತಿದ್ದ ಧುನಿಯ ಸುತ್ತ ಅವರೆಲ್ಲ ಕುಳಿತಿದ್ದಾಗ ಪ್ರಾಪಂಚಿಕ ಜೀವನವನ್ನು ತ್ಯಜಿಸಲು ನಿರ್ಧರಿಸಿದರು. ಅಂದು ಕ್ರಿಸ್‌ಮಸ್ ದಿನವಾಗಿತ್ತು. ಬಾರಾನಗರದ ಮನೆಗೆ ಹಿಂತಿರುಗಿದ ನಂತರ ಇವರು ಶ್ರೀರಾಮಕೃಷ್ಣರ ಇತರ ಶಿಷ್ಯರೊಂದಿಗೆ ವಿಧಿವತ್ತಾಗಿ ಸಂನ್ಯಾಸ ವ್ರತವನ್ನು ಕೈಗೊಂಡು, ಸಂನ್ಯಾಸನಾಮವನ್ನು ಸ್ವಾಮಿ ವಿವೇಕಾನಂದರಿಂದ ಸ್ವೀಕರಿಸಿದರು. ಬಾಬುರಾಮನು ನಿಜ ವಾಗಿಯೂ ಪ್ರೇಮದ ಮೂರ್ತ ಸ್ವರೂಪವೆಂದು ಅವರಿಗೆ ಅನ್ನಿಸಿದ್ದರಿಂದ, ನಾನು ಆಗಲೆ ಹೇಳಿದಂತೆ, ಅವರಿಗೆ ಪ್ರೇಮಾನಂದ ಎಂಬ ಹೆಸರನ್ನು ಕೊಟ್ಟರು. ಪ್ರೇಮಾನಂದ ಎಂದರೆ, ದಿವ್ಯ ಪ್ರೇಮದ ಆನಂದ.

ಬಾರಾನಗರದಲ್ಲಿ ಅವರೆಲ್ಲರೂ ವೈರಾಗ್ಯ ಜೀವನವನ್ನು ನಡೆಸಿದರು. ಅನಂತರ ಸ್ವಾಮಿ ಪ್ರೇಮಾನಂದರು ಆ ಕಾಲದ ಜೀವನದ ಬಗ್ಗೆ ಹೇಳುತ್ತಿದ್ದರು. ಅತ್ಯಂತ ಆವಶ್ಯಕವಾದ ವಸ್ತುಗಳನ್ನು ಕೊಳ್ಳಲೂ ಅವರಲ್ಲಿ ಹಣವಿರುತ್ತಿರಲಿಲ್ಲ. ಅನ್ನವಿದ್ದರೆ, ಅದಕ್ಕೆ ಸೇರಿಸಲು ಉಪ್ಪು ಇರುತ್ತಿರಲಿಲ್ಲ, ತರಕಾರಿ ಮತ್ತು ಇತರ ವಸ್ತುಗಳ ಮಾತು ಹಾಗಿರಲಿ. ಆದರೆ ಅವರು ಊಟ ಮತ್ತು ನಿದ್ರೆಯ ಬಗ್ಗೆ ಗಮನ ಕೊಡುತ್ತಿರಲಿಲ್ಲ. ಧ್ಯಾನ ಮತ್ತು ಇತರ ಆಧ್ಯಾತ್ಮಿಕ ಸಾಧನೆಗಳಲ್ಲೇ ಅನೇಕ ಗಂಟೆಗಳನ್ನು ಕಳೆಯುತ್ತಿದ್ದರು. ಭಗವದ್ಭಾವನೆಯಲ್ಲಿ ತನ್ಮಯರಾಗಿರುವುದೇ ಅವರ ಮನಸ್ಸನ್ನೆಲ್ಲ ಆವರಿಸಿತ್ತು. ಅವರಲ್ಲಿ ಸ್ವಾಮಿ ರಾಮಕೃಷ್ಣಾನಂದರೆಂಬುವರು ಇದ್ದರು. ಅವರು ದಿನಕ್ಕೆ ಒಮ್ಮೆಯಾದರೂ ಊಟ ಮಾಡುವಂತೆ ಎಲ್ಲರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು. ಹೇಗೋ ಎಲ್ಲರೂ ದೃಢಕಾಯರಾಗಿ ಶಕ್ತಿವಂತರಾಗಿದ್ದರು. ಆ ದಿನಗಳು ವಿಚಿತ್ರವಾಗಿ ಪ್ರಚಂಡ ಸಾಧನೆಯಿಂದ ಕೂಡಿದ್ದು, ಅವರೆಲ್ಲರೂ ಅನೇಕ ಆಧ್ಯಾತ್ಮಿಕ ಅನುಭವಗಳನ್ನು ಪಡೆದರು. ಅನಂತರ, ಸಾಧನೆಯಲ್ಲಿ ತಮ್ಮ ಮನಸ್ಸು ಸಂಪೂರ್ಣವಾಗಿ ಮುಳುಗಿ ಹೋಗಿರಬೇಕೆಂಬ ಪ್ರಬಲ ಇಚ್ಛೆಯಿಂದ ಅವರೆಲ್ಲ ಹತ್ತು ವರ್ಷಗಳ ಕಾಲ ಪರಿವ್ರಾಜಕರಾಗಿ ತಿರುಗಾಡಲು ಹೊರಟರು.

ಈ ಕಾಲದಲ್ಲಿ ಸ್ವಾಮಿ ಪ್ರೇಮಾನಂದರ ಜೀವನದ ಬಗ್ಗೆ ನಮಗೆ ತಿಳಿದಿರುವುದು ಅತ್ಯಲ್ಪ ; ಅದರ ವರದಿಗಳೂ ಸಿಕ್ಕಿಲ್ಲ. ಅವರು ಆಗಾಗ ಹೊರಗೆ ಹೋದರೂ, ಬಹುಕಾಲ ಮಠದಲ್ಲಿಯೇ ಇದ್ದರೆಂದು ನಮ್ಮ ಊಹೆ. ಅವರು ಕಾಶಿಯಲ್ಲಿ ಇದ್ದರು ಮತ್ತು ವೃಂದಾವನದಲ್ಲಿ ಹೆಚ್ಚು ಕಾಲ ಕಳೆದರೆಂದು ತಿಳಿದುಬಂದಿದೆ. ಉತ್ತರ ಭಾರತದಲ್ಲಿ ಮತ್ತೊಬ್ಬ ಸಾಧುಗಳೊಂದಿಗೆ ೧೮೯೦ರ ಪ್ರಾರಂಭದ ಕಾಲದಲ್ಲಿ, ಸ್ವಾಮಿ ವಿವೇಕಾನಂದರು ಅಮೆರಿಕಾದಿಂದ ಹಿಂದಿರುಗುವವರೆಗೆ ಸುತ್ತಾಡುತ್ತಿದ್ದರೆಂದು ನಮಗೆ ತಿಳಿದಿದೆ.

೨

ಸ್ವಾಮಿ ವಿವೇಕಾನಂದರು ಪಶ್ಚಿಮ ದೇಶಗಳಿಂದ ಹಿಂತಿರುಗಿ ಬಂದ ಮೇಲೆ ಶ್ರೀರಾಮಕೃಷ್ಣರ ಶಿಷ್ಯರ ಜೀವನದಲ್ಲಿ, ಅದರಲ್ಲೂ ಸಂನ್ಯಾಸೀ ಶಿಷ್ಯರ ಜೀವನದಲ್ಲಿ ಒಂದು ಹೊಸ